ಚನ್ನಪಟ್ಟಣ ತಾಲ್ಲೂಕಿನ ಸಿ ಮತ್ತು ಡಿ ವರ್ಗದ ಜಮೀನಿನ ಬಗ್ಗೆ

1069-ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಪಟ್ಟಣ ತಾಲ್ಲೂಕಿನಲ್ಲಿ ಎಷ್ಟು ಎಕರೆ ಸಿ ಮತ್ತು ಡಿ ವರ್ಗದ ಜಮೀನು ಕಂದಾಯ ಇಲಾಖೆಗೆ ಸೇರಿರುತ್ತದೆ (ಸರ್ವೆ ನಂ. ವಿಸ್ತೀರ್ಣ ಮತ್ತು ಗ್ರಾಮದ ಹೆಸರುಗಳನ್ನು ನೀಡುವುದು):

ಆ) ಸಿ ಮತ್ತು ಡಿ ವರ್ಗದ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆಯೇ?

ಇ) ಆಗಿದ್ದಲ್ಲಿ ಅಂತಹ ಜಮೀನುಗಳ ವಿಸ್ತೀರ್ಣ, ಸರ್ವೆ ನಂಬರ್‌ಗಳ ವಿವರ ನೀಡುವುದು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) 10397 ಎಕರೆ 30 ಗುಂಟೆಗಳು (ವಿವರಗಳ ಅನುಬಂಧ ನೀಡಲಾಗಿದೆ)

ಆ) ಅರಣ್ಯ ಇಲಾಖೆಗೆ ಕಾದಿರಿಸಿ ಅದಿಸೂಚಿತವಾದ ಜಮೀನನ್ನು ಹೊರತುಪಡಿಸಿ ಉಳಿದ ಜಮೀನನ್ನು ದಿನಾಂಕ 3-1-91 ರಲ್ಲಿ ಕಂದಾಯ ಇಲಾಖೆಗೆ ವಾಪಸ್ಸು ಪಡೆಯಲಾಗಿದೆ.

ಇ) ಮೇಲಿನ (ಅ)ನಲ್ಲಿರುವಂತೆ.

ಲಂಬಾಣಿ ತಾಂಡಗಳನ್ನು; ಹ್ಯಾಮ್ ಲೆಟ್ ಗೊಲ್ಲರ ಹಟ್ಟಿ ಮುಂತಾದವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ.

485-ಆರ್. ನಾರಾಯಣ (ಬೆಳ್ಳಾವಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಂಬಾಣಿ ತಾಂಡಗಳು ಗೊಲ್ಲರ ಹಟ್ಟಿಗಳು ಹ್ಯಾಮ್‌ಲೆಟ್‌ಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಯಾವುದಾದರೂ ಆಳತೆಗೋಲುಗಳನ್ನು ರೂಪಿಸಲಾಗಿದೆಯೆ?

ಆ) ತುಮಕೂರು ಜಿಲ್ಲೆಯಲ್ಲಿ ಇದುವರೆವಿಗೆ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಲಂಬಾಣಿ ತಾಂಡಗಳು ಗೊಲ್ಲರ ಹಟ್ಟಿಗಳು, ಹ್ಯಾಮ್‌ಲೆಟ್‌ಗಳ ಸಂಖ್ಯೆ ಎಷ್ಟು?

ಇ) ಹೆಚ್ಚು ಲಂಬಾಣಿ ತಾಂಡಗಳು, ಗೊಲ್ಲರ ಹಟ್ಟಿಗಳು ಹ್ಯಾಮ್‌ಲೆಟ್ ಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಸುಗಮ ವಾಗುವಂತೆ ಲಂಬಾಣಿ ತಾಂಡಗಳು ಗೊಲ್ಲರ ಹಟ್ಟಿಗಳು ಮತ್ತು ಹ್ಯಾಮಲೆಟ್ ಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಪ್ರಸ್ತುತ ಇರುವ ಆಳತೆ ಗೋಲನ್ನು ಸರ್ಕಾರವು ಸಡಿಲಗೊಳಿಸುವುದೇ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

ಅ) ಹೌದು.

ಆ) ಆಕ್ಷೇಪಣೆಗಳನ್ನು ಕರೆದಿರುವ 5ಕರಡು ಅಧಿಸೂಚನೆಗಳನ್ನು ಹೊರಡಿಸಲಾಗಿದೆ.

ಇ) ಹೌದು. ಇದು ಪರಿಶೀಲನೆಯಲ್ಲಿದೆ.